**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ.505/2024

| | | |
|---|---|---|
| ಸಾಕ್ಷಿದಾರರ ಹೆಸರು | ರಾಜೇಶ್ ಹೆಚ್ | ಸಿ.ಡಬ್ಲ್ಯು-6 |
| ತಂದೆಯ ಹೆಸರು | ರಾಮಚಂದ್ರ ರಾವ್ | ಪಿ .ಡಬ್ಲ್ಯೂ-3 |
| ವಯಸ್ಸು | 56 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಕಾರ್ಪೆಂಟರ್ | ದಿನಾಂಕಃ |
| ವಾಸಃ | ಸಾಗರ | 14.07.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ಚಾ.ಸಾ 1 ರಿಂದ 5 ನನಗೆ ಗೊತ್ತು. ಆರೋಪಿತನು ಗೊತ್ತು.

**2.** ದಿನಾಂಕ 24.01.2024 ರಂದು ಪೋಲಿಸರು ನನ್ನನ್ನು ಹಾಗೂ ಚಾ.ಸಾ 3 ರವರನ್ನು ಆರೋಪಿತನ ಮತ್ತು ಚಾ.ಸಾ 1 ರವರ ನಡುವೆ ಆದ ಗಲಾಟೆ ಸಂಬಂಧ ಸಾಗರದ ಅಗ್ರಹಾರ ಸರ್ಕಲ್ ನಲ್ಲಿರುವ ಸದ್ಗುರು ಹೋಟೇಲಿನ ಬಳಿ ಸ್ಥಳ ಪಂಚನಾಮೆಗಾಗಿ ಕರೆದಿದ್ದರು. ಅದರಂತೆ ನಾನು ಮತ್ತು ಚಾ.ಸಾ 3 ರವರು ಘಟನಾ ಸ್ಥಳದಲ್ಲಿ ಹಾಜರಿದ್ದು, ಚಾ.ಸಾ 1 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿ, ನಕ್ಷೆ ತಯಾರಿಸಿ, ಫೋಟೋ ತೆಗೆದು, ಆರೋಪಿತನು ಚಾ.ಸಾ 1 ರವರಿಗೆ ಹಲ್ಲೆ ಮಾಡಿದ ಪೋಕರ್ ಮತ್ತು ಫೋನ್ ನ ರಿಸೀವರ್ ಅನ್ನು ಅಮಾನತ್ತು ಪಡಿಸಿಕೊಂಡರು. ನಿಪಿ-6 ಮತ್ತು 3 ರಲ್ಲಿನ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಹಿಗಳನ್ನು ನಿಪಿ-6(ಸಿ) ಮತ್ತು ನಿಪಿ-3(ಸಿ) ಎಂದು ಗುರುತಿಸಲಾಯಿತು.

**3.** ನಂತರ ಅಲ್ಲಿಂದ ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿ ಅಲ್ಲಿ ಚಾ.ಸಾ 1 ರವರ ರಕ್ತದ ಕಲೆಯಾಗಿದ್ದ ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಂಡು, ಫೋಟೋ ತೆಗೆದುಕೊಂಡರು. ಆಗ ನಾನು, ಚಾ.ಸಾ 1 ಮತ್ತು ಚಾ.ಸಾ 7 ರವರು ಹಾಜರಿದ್ದೆವು. ಸಾಕ್ಷಿಯು ನಿಪಿ-4, 5, 7 ಮತ್ತು 8 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತನನ್ನು ಹಾಗೂ ಎಂ.ಒ-1 ಮತ್ತು 2 ಅನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಘಟನೆಯ ಕುರಿತು ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದಾರೆ.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಡಿ.ಎಂ.ಆರ್ ರವರಿಂದಃ–**

**1.** ನಾನು ಮತ್ತು ಚಾ.ಸಾ 1 ರವರು ಅಕ್ಕಪಕ್ಕದ ಮನೆಯವರು ಎಂದರೆ ಸರಿ. ಪಂಚನಾಮೆಯನ್ನು ಹೀಗೆ ಬರೆಯಬೇಕು ಎಂದು ನಾನು ಪೋಲಿಸರಿಗೆ ಹೇಳಿಲ್ಲ. ಪೋಲಿಸರು ಬರೆದ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ಪಂಚನಾಮೆಗೆ ನನ್ನನ್ನು ಚಾ.ಸಾ 1 ರವರು ಕರೆದಿದ್ದರು ಎಂದರೆ ಸರಿ. ನನ್ನ ಸಮಕ್ಷಮ ಚಾ.ಸಾ 1 ರವರಿಂದ ಪೋಲಿಸರು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ಪೋಲಿಸ್ ಠಾಣೆಗೆ ಬರುವಂತೆ ಪೋಲಿಸರು ನನ್ನನ್ನು ಕರೆದಿಲ್ಲ. ಪೋಲಿಸ್ ಠಾಣೆಯಲ್ಲಿ ಪೋಲಿಸರು ಚಾ.ಸಾ 1 ರವರಿಂದ ಏನನ್ನು ವಶಪಡೆದುಕೊಂಡಿಲ್ಲ. ಪೋಲಿಸ್ ಠಾಣೆಯಲ್ಲಿ ಪೋಲಿಸರು ಯಾವುದೇ ಬರವಣಿಗೆಯನ್ನು ಮಾಡಿಲ್ಲ. ನಾನು ಚಾ.ಸಾ 1 ರವರ ಸ್ನೇಹಿತ ಮತ್ತು ಪಕ್ಕದ ಮನೆಯವರಾಗಿರುವ ಕಾರಣ ಯಾವುದೇ ಘಟನೆ ನಡೆಯದೇ ಇದ್ದರೂ ಚಾ.ಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನಿಗೆ ಹಾಗೂ ಈ ಪ್ರಕರಣ ಹಾಗೂ ಮು.ಮಾಲುಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.